ದಿಃ 26-04-2017 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

॥ ಪಾಟೀ ಸವಾಲು ॥ ಪ್ರತಿವಾದಿ ಪರ ವಕೀಲರಿಂದ ॥

ನಾನು ಮೋಟೆಬೆನ್ನೂರಿನ ಖಾಯಂ ನಿವಾಸಿ ಇರುತ್ತೇನೆ. ಕಮಲವ್ವ ಸಹ ಮೋಟೆಬೆನ್ನೂರಿನಲ್ಲಿ ವಾಸವಾಗಿರುತ್ತಾಳೆ. ಕಮಲವ್ವ ಮತ್ತು ಕಮಲವ್ವಳ ಮಗ ಅಂದರೆ ವಾದಿಯರು ಮೋಟೆಬೆನ್ನೂರಿನಲ್ಲಿ ವಾಸವಾಗಿರುವುದರಿಂದ ಅವರು ನನಗೆ ಪರಿಚಯ. ನನಗೆ ಉಪ್ಪಣಸಿ, ಬ್ಯಾಗವಾದಿ, ಮತ್ತು ಹೇರೂರು, ಕೂಸನೂರು, ಗ್ರಾಮಗಳ ಪರಿಚಯ ಅಷ್ಟೊಂದು ಇಲ್ಲ ಆವಾಗಾವಾಗ ನಾನು ಅಲ್ಲಿಗೆ ಹೋಗಿರುತ್ತೇನೆ. ಈ ದಾವೆಯನ್ನು ಏತಕ್ಕಾಗಿ ಮಾಡಿರುತ್ತಾರೆ ಅಂತಾ ನನಗೆ ಗೊತ್ತಿಲ್ಲ. ಕಮಲವ್ವ ಅಂದರೆ 1 ನೇ ವಾದಿಯ ಗಂಡನ ಹೆಸರು ಕರಡೆಪ್ಪ. ಕರಡೆಪ್ಪ ಹೇರೂರಿನಲ್ಲಿ ವಾಸವಾಗಿದ್ದ. ಕರಡೆಪ್ಪನ ಜೊತೆ 1 ನೇ ವಾದಿ ಹೇರೂರಿನಲ್ಲಿ ವಾಸವಾಗಿದ್ದಳು. ಕಮಲವ್ವ ಅಂದರೆ 1 ನೇ ವಾದಿ ತಾನು ತನ್ನ ಗಂಡನ ಜೊತೆ ಸರಿ ಇಲ್ಲದ್ದರಿಂದ ತನ್ನ ತವರು ಮನೆ ಮೋಟೆಬೆನ್ನೂರಿನಲ್ಲಿ ವಾಸವಾಗಿರುತ್ತಾಳೆ ಅಂತಾ ಅವಳು ತನ್ನ ಸಾಕ್ಷ್ಯದಲ್ಲಿ ಹೇಳಿದ್ದು ಸುಳ್ಳು ಇರುತ್ತದೆ. ಮೃತ ಕರಡೆಪ್ಪನಿಗೆ 1 ಮತ್ತು 2 ನೇ ವಾದಿಯರನ್ನು ಹೊರತುಪಡಿಸಿ ಬೇರೆ ವಾರಸುದಾರರು ಇರುತ್ತಾರೆ. ಆ ರೀತಿ ವಾರಸುದಾರರು ಅಂದರೆ ಆತನ ಎರಡನೇ ಹೆಂಡತಿ ಮತ್ತು ಆನಂದ ಅನ್ನುವುದು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಆನಂದ ಅನ್ನುವ ಆ ವ್ಯಕ್ತಿಯನ್ನು ಪಾರ್ಟಿಯನ್ನಾಗಿ ಮಾಡಿರುವುದಿಲ್ಲ. ಈ ದಾವೆಯ ಬಗ್ಗೆ ನಾನು ಈ ಸಾಕ್ಷ್ಯ ಹೇಳಲು ಬರುವುದಕ್ಕಿಂತ ಮುಂಚೆ ಓದಿ ತಿಳಿದುಕೊಂಡಿಲ್ಲ. ಕರಡೆಪ್ಪನ ಮಗ ಆನಂದ ಈತನನ್ನು ಈ ಪ್ರಕರಣದಲ್ಲಿ 16 ನೇ ಪ್ರತಿವಾದಿ ಅಂತಾ ತೋರಿಸಿರುತ್ತಾರೆ ಅನ್ನುವುದು ನನಗೆ ಗೊತ್ತಿಲ್ಲ. ವಾದಿಯರು ಆಸ್ತಿಯ ವಿಷಯವಾಗಿ ದಾವೆ ಮಾಡಿರುತ್ತಾರೆ. ದಾವೆಯಲ್ಲಿ ಏನು ಪರಿಹಾರ ಕೇಳಿರುತ್ತಾರೆ ಅಂತಾ ನನಗೆ ಗೊತ್ತಿಲ್ಲ. ಕರಡೆಪ್ಪನ ಆಸ್ತಿಯ ವಿಷಯವಾಗಿ ವಾದಿಯರು ದಾವೆ ಮಾಡಿರುತ್ತಾರೆ, ಆ ದಾವಾ ಆಸ್ತಿಗಳ ನಂಬರ್ ಮತ್ತು ಕ್ಷೇತ್ರ ನನಗೆ ಹೇಳಲು ಆಗುವುದಿಲ್ಲ. ಅದೇ ರೀತಿ ದಾವಾ ಆಸ್ತಿಗಳು ಯಾವ ಯಾವ ಊರಲ್ಲಿ ಇವೆ ಅಂತಾ ಸಹ

ನನಗೆ ಹೇಳಲು ಆಗುವುದಿಲ್ಲ. ದಾವಾ ಆಸ್ತಿಗಳು ಕರಡೆಪ್ಪ ಈತನಿಗೆ ಯಾವ ರೀತಿ ಪ್ರಾಪ್ತವಾಗಿರುತ್ತವೆ ಅಂತಾ ನನಗೆ ಹೇಳಲು ಆಗುವುದಿಲ್ಲ.

2. ಆನಂದನ ಹೆಸರಿನಲ್ಲಿ ಕರಡೆಪ್ಪ ಬ್ಯಾಗವಾದಿ ಗ್ರಾಮದ ನಾಲ್ಕೂವರೆ ಎಕರೆ ಜಮೀನು ಖರೀದಿ ಮಾಡಿದ್ದ ಅನ್ನುವುದು ನನಗೆ ಗೊತ್ತಿಲ್ಲ. ಆ ಒಂದು ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳು ಕರಡೆಪ್ಪ ಈತನಿಗೆ ಸಂಬಂಧ ಇಲ್ಲ ಅನ್ನುವುದು ನನಗೆ ಗೊತ್ತಿಲ್ಲ. 1987 ನೇ ಇಸ್ವಿಯಲ್ಲಿ ಕರಡೆಪ್ಪ ಬ್ಯಾಗವಾದಿ ಗ್ರಾಮದ ಸರ್ವೆ ನಂ. 131಼1 ಇದರಲ್ಲಿ 4 ಎಕರೆ 20 ಗುಂಟೆ ಆಸ್ತಿಯನ್ನು ಆನಂದ ಈತನ ಹೆಸರಿನಲ್ಲಿ ಖರೀದಿ ಮಾಡಿರುತ್ತಾನೆ ಅನ್ನುವುದು ನನಗೆ ಗೊತ್ತಿಲ್ಲ. ವಾದಿಯರು ಕರಡೆಪ್ಪನ ಆಸ್ತಿಯಲ್ಲಿ ಹಿಸ್ಸೆ ಕೇಳಿ ಈ ದಾವೆ ಸಲ್ಲಿಸಿರುತ್ತಾರೆ. ಕರಡೆಪ್ಪನಿಗೆ ಮೇಲೆ ಹೇಳಿದ 4 ಎಕರೆ 20 ಗುಂಟೆ ಜಮೀನು ಬಿಟ್ಟರೆ ಬೇರೆ ಜಮೀನು ಇದ್ದಿರಲಿಲ್ಲ. ಆತನಿಗೆ ಬೇರೆ ಆಸ್ತಿಗಳಲ್ಲಿ ಹಕ್ಕು ಇಲ್ಲ ಅನ್ನುವುದು ನನಗೆ ಗೊತ್ತಿಲ್ಲ. ನಾನು ಮತ್ತು ವಾದಿಯರು ಮೋಟೆಬೆನ್ನೂರಿನಲ್ಲಿ ವಾಸವಾಗಿರುವುದರಿಂದ ಅವರಿಗೆ ಸಹಾಯವಾಗಲಿ ಅಂತಾ ನಾನು ಸಾಕ್ಷಿ ಹೇಳಲು ಬಂದಿರುತ್ತೇನೆ ಅನ್ನುವುದು ಸರಿಯಲ್ಲ.

(ಈ ಹಂತದಲ್ಲಿ 16 ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ನ. ಸ. ಓ ಹೇ ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್